**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 237/2023**

| | | | |
|---|---|---|---|
| **ಹೆಸರು** | **:** | **ರಾಜಶೇಖರ** | **ಚಾಸಾ. 9** |
| **ತಂದೆಯ ಹೆಸರು** | **:** | **ತಿಪ್ಪಣ್ಣಾ** | **ಪ್ರಾ.ಸಾ.4** |
| **ವಯಸ್ಸು** | **:** | **44 ವರ್ಷ** | **ದಿನಾಂಕಃ 13-08-2025** |
| **ಉದ್ಯೋಗ** | **:** | **ಮುಖ್ಯವೇದೆ** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 24-08-2021 ರಿಂದ ಇಲ್ಲಿಯವರೆಗೆ ಚಿಂಚೋಳಿ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿನಾಂಕಃ 17-03-2023 ರಂದು ಸಂಜೆ 5 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ಚಾಸಾ 1 ರವರು ನಮ್ಮ ಠಾಣೆಗೆ ಹಾಜರಾಗಿ ಒಂದು ದೂರು, ನಿಪಿ-2 ರ ಜಪ್ತಿ ಪಂಚನಾಮೆ, ಮುದ್ದೆ ಮಾಲು ಹಾಗೂ ಆರೋಪಿತರನ್ನು ತಂದು ಹಾಜರು ಪಡಿಸಿದ್ದು ಸದರಿ ದೂರಿನ ಸಾರಾಂಶದ ಮೇರೆಗ ಠಾಣೆ ಗುನ್ನೆ ಸಂಖ್ಯೆ 30/2023 ರಲ್ಲಿ ಪ್ರ.ವ.ವರದಿಯನ್ನು ದಾಖಲಿಸಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-4 ರಿಂದ 6ರವರ ಹೇಳಿಕೆಗಳನ್ನು ಪಡೆದಿದ್ದೇನೆ. ನಂತರ ಆರೋಪಿತರಿಗೆ ಕಲಂ 41 ರಡಿಯಲ್ಲಿ ನೋಟಿಸನ್ನು ನೀಡಿ ಬಿಡುಗಡೆ ಮಾಡಿದ್ದೇನೆ. ಸದರಿ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೊಪಿತರು ಆಗಿರುತ್ತಾರೆ. ದಿನಾಂಕ 29-03-2023 ರಂದು ಜಪ್ತಿ ಮಾಡಿದ ಮುದ್ದೇ ಮಾಲನ್ನು ಚಾಸಾ-7ರವರ ಮುಖಾಂತರ ರಾಸಾಯನಿಕ ಪರೀಕ್ಷೆಗೆ ಕಳುಹಿಸಿ ಕೊಟ್ಟು ಚಾಸಾ-7ರವರ ಹೇಳಿಕೆಯನ್ನು ಪಡೆದಿದ್ದೇನೆ. ದಿನಾಂಕ 20-06-2023 ರಂದು ರಾಸಾಯನಿಕ ಪರೀಕ್ಷೆ ವರದಿಯನ್ನು ಪಡೆದಿದ್ದೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-4 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಚಾಸಾ-7ರವರು ನನಗೆ ಸಲ್ಲಿಸಿದ ರಸೀದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ದಿನಾಂಕ 21-06-2023 ರಂದು ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ VHR ವಕೀಲರಿಂದಃ</u>**

ಆ ದಿನ ಚಾಸಾ-1ರವರು ನಮ್ಮ ಠಾಣೆಯಲ್ಲಿ ಸಾಯಂಕಾಲ 5 ರಿಂದ 7 ಗಂಟೆವರೆಗೆ ಇದ್ದರು. ಚಾಸಾ-3 ನಮ್ಮ ಠಾಣೆಯಲ್ಲಿ ಕಸ ಗೂಡಿಸುವ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಮುದ್ದೇ ಮಾಲು ಯಾವ ವೈನ ಶಾಪದಿಂದ ಸಾಗಾಣಿಕೆಯಾಗಿದೆ ಎಂದು ನಾನು ತನಿಖೆ ಮಾಡಿಲ್ಲ. ಚಾಸಾ-4 ರಿಂದ 6ರವರು ಹೇಳಿದಂತೆ ಅವರ ಹೇಳಿಕೆಯನ್ನು ಪಡೆದಿದ್ದೇನೆ. ಮಧ್ಯಾಹ್ನ 2.45 ಕ್ಕೆ ಬಾತ್ಮಿ ಬಂದಿದ್ದು ಮಧ್ಯಾಹ್ನ 2.30 ಗಂಟೆಗೆ ಠಾಣೆಯಿಂದ ಹೋರಟಿರುವ ಬಗ್ಗೆ ಚಾಸಾ-4 ರಿಂದ 6ರವರು ನನಗೆ ಹೇಳಿಕೆಯನ್ನು ನೀಡಿರುತ್ತಾರೆ. ಮಧ್ಯಾಹ್ನ 2.45 ಗಂಟೆಗೆ ಬಾತ್ಮಿ ಬಂದಾಗ ಅದರ ಮೊದಲು ಮಧ್ಯಾಹ್ನ 2.30 ಗಂಟೆಗೆ ಹೋಗಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದಾಗ ಸಾಕ್ಷಿ ಸಮಯ ಬರೆಯುವುದರಲ್ಲಿ ತಪ್ಪು ಆಗಿದೆ ಎಂದು ನುಡಿಯುತ್ತಾರೆ. ಸಮಯ ಬರೆಯುವುದರಲ್ಲಿ ತಪ್ಪು ಆಗಿದೆ ಎಂದು ನನ್ನ ಅಂತಿಮ ವರದಿಯಲ್ಲಿ ಉಲ್ಲೇಖವಿಲ್ಲ. ನನ್ನ ಮುಂದೆ ಚಾಸಾ-4 ರಿಂದ 6ರವರು ಸುಳ್ಳು ಹೇಳಿಕೆ ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರರಿಗೆ ಹೇಳಿಕೆಯನ್ನು ಓದಿ ಹೇಳಿದ್ದೇನೆ ಮತ್ತು ಅವರು ಅದು ಸರಿಯಿದೆ ಎಂದು ಹೇಳಿರುತ್ತಾರೆ.

ಆ ಸಮಯಕ್ಕೆ ಚುನಾವಣೆ ಇತ್ತು ಎಂದರೆ ಸರಿ. ಪ್ರತಿಯೊಂದು ಠಾಣೆಯಲ್ಲಿ ಇಂತಷ್ಟು ಪ್ರಕರಣ ದಾಖಲಿಸ ಬೇಕು ಎಂದು ಮೇಲಿಂದ ಆದೇಶವಿರುತ್ತದೆ ಎಂದರೆ ಸರಿ. ಅಂಕೆ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ತನಿಖೆ ಕಾಲಕ್ಕೆ ನಾನು ಘಟನಾ ಸ್ಥಳಕ್ಕೆ ಹೋಗಿ ತನಿಖೆ ಮಾಡಿಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಈ ದಿನಾ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**